**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರಃ 543-2017**

| | |
|---|---|
| **ಫಿರ್ಯಾದುದಾರರುಃ** | ಸರ್ಕಾರದ ಪರ<br>ಕೊಲ್ಲೂರು ಠಾಣಾ ಪೊಲೀಸರು. |

-ಮತ್ತು-

| | |
|---|---|
| **ಆರೋಪಿತರುಃ** | 1. ಸಂತೋಷ್,<br>2. ಪ್ರಕಾಶ್ ಶೆಟ್ಟಿ, |

****

**ಃದೋಷಾರೋಪಣೆಃ**

**ಶ್ರೀಮತಿ ವಿದ್ಯಾ ಎ. ಎಸ್., ಬಿ.ಎ. ಎಲ್ಎಲ್.ಬಿ., 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ** ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ಆಪಾದನೆ ಏನೆಂದರೆಃ

ದಿನಾಂಕ 14-01-2016 ರಂದು ಸಾಕ್ಷಿ 1 ನೇಯವರು ಚಿತ್ತೂರು ಗ್ರಾಮದ, ಬ್ರಹ್ಮಲಿಂಗೇಶ್ವರ ದೇವಸ್ಥಾನ, ಮಾರಣಕಟ್ಟೆ ದೇವಸ್ಥಾನದ ಜಾತ್ರಾ ಬಂದೋಬಸ್ತ್ ಕರ್ತವ್ಯದಲ್ಲಿ ಘನ ವಾಹನ ಪಾರ್ಕಿಂಗ್ ಸ್ಥಳದಲ್ಲಿ ರಾತ್ರಿ ಪಾಳಿಯಲ್ಲಿ ಸಂಚಾರ ನಿಯಂತ್ರಣ ಕರ್ತವ್ಯ ಮಾಡುತ್ತಿದ್ದಾಗ ಮಾರಣಕಟ್ಟೆ ದೇವಸ್ಥಾನ ಕಡೆಯಿಂದ ಚಿತ್ತೂರು ಕಡೆಗೆ ಸುಮಾರು ರಾತ್ರಿ 10-30 ಗಂಟೆಗೆ ಆರೋಪಿತರಾದ ನೀವುಗಳು ನಿಮ್ಮ ಬಾಬ್ತು ಕೆಎ-20-ಜಡ್-4173 ನೇ ನಂಬ್ರದ ಬೊಲೆರೋ ವಾಹನವನ್ನು ಸಂಚಾರ ದಟ್ಟಣೆ ಇದ್ದಾಗ ಸಾಕ್ಷಿ 1 ಮತ್ತು 2 ನೇಯವರನ್ನುದ್ದೇಶಿಸಿ 2 ನೇ ಆರೋಪಿತರಾದ ನೀವು ಎಲ್ಲಿ ಸತ್ತಿದ್ದೀರಿ ಬೋಳಿಮಕ್ಕಳೇ, ಸೂಳೆಮಕ್ಕಳೇ, ಬೇವರ್ಷಿ" ಎಂದು ಅವಾಚ್ಯ ಶಬ್ದದಿಂದ ಬೈದು ಅವಮಾನಗೊಳಿಸಿ ಅವರನ್ನು ಬೇರೆ ಅಪರಾಧ ಮಾಡುವಂತೆ ಪ್ರಚೋದಿಸಿ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಜೊತೆಗೆ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

**2.** ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮಾನ ಉದ್ದೇಶವನ್ನು ಮುಂದುವರೆಸಿ, ಆ ಪೈಕಿ 1 ನೇ ಆರೋಪಿತರಾದ ನೀವು ಸಾಕ್ಷಿ 1 ನೇಯವರ ಮುಖಕ್ಕೆ ಕೈಯಿಂದ ಹೊಡೆದಿರುವಿರೆಂದೂ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 323 ಜೊತೆಗೆ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

**3.** ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ 1 ಮತ್ತು 2 ನೇ ಆರೋಪಿತರಾದ ನೀವುಗಳು ಸಮವಸ್ತ್ರದಲ್ಲಿ ಕರ್ತವ್ಯ ನಿರತರಾಗಿದ್ದ ಸಾಕ್ಷಿ 1 ಮತ್ತು 2 ನೇಯವರಿಗೆ ಅವಾಚ್ಯ ಶಬ್ದದಿಂದ ಬೈದು ಕೈಯಿಂದ ಹೊಡೆದು ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿರುವಿರೆಂದೂ, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 353 ಜೊತೆಗೆ 34 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

**ಮೇಲ್ಕಂಡ ದೋಷಾರೋಪಣೆಯನ್ನು ನ್ಯಾಯಾಲಯದಲ್ಲಿ ಹಾಜರಿದ್ದ ಆರೋಪಿತರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಗಿ ಅವರ ಉತ್ತರವನ್ನು ದೃಢೀಕರಿಸಲಾಗಿದೆ.**

ದಿ. 18.07.2022

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.**

RMS/-